ಮೈಸೂರು ವಿಶ್ವವಿದ್ಯಾನಿಲಯ

ಸಂ NAD

ದಿನಾಂಕ 06-04-2026

# ವಿದ್ಯಾರ್ಥಿಗಳ ಗಮನಕ್ಕೆ

2021-22 ನೇ ಸಾಲಿನಿಂದ 2024-25 ನೇ ಸಾಲಿನವರೆವಿಗೂ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ತಾತ್ಕಾಲಿಕ ಪದವಿ ಪ್ರಮಾಣ ಪತ್ರ (PDC)ವನ್ನು ಅಪ್‌ಲೋಡ್ ಮಾಡಲಾಗಿದ್ದು, ಇನ್ನೂ ಕೆಲವು ವಿದ್ಯಾರ್ಥಿಗಳು ABC or APAAR I.D.ಯನ್ನು ಅಪ್ರೂವ್ ಮಾಡಲು ದಿನಾಂಕ 30-11-2025 ರಂದು ಕಡೆಯ ದಿನಾಂಕವಾಗಿತ್ತು; ಆದರೆ 2021 ನೇ ಸಾಲಿನಿಂದ 2024 ನೇ ಸಾಲಿನವರೆಗೆ ಡಿಜ಼ಿಲಾಕರ್ Account ಅನ್ನು ಭಾರತ ಸರ್ಕಾರದ ಯು.ಜಿ.ಸಿ. ನವದೆಹಲಿ, ವತಿಯಿಂದಲೇ ದೇಶಾದ್ಯಾಂತ ದಿನಾಂಕ 30-11-2025 ರಿಂದ ನಿಷ್ಕ್ರಿಯ(FREEZE) ಗೊಳಿಸಲಾಗಿರುವುದರಿಂದ, ABC or APAAR I.D. ಯನ್ನು ಅಪ್ರೂವ್ ಮಾಡದಿರುವಂತಹ ಕೆಲವು ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗಿರುವುದಿಲ್ಲ; ಆದ್ದರಿಂದ, ಅಂತಹ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಅಪ್‌ಲೋಡ್ ಮಾಡಲು ಅಡಚಣೆಯುಂಟಾಗಿರುತ್ತದೆ ಎಂದು ತಿಳಿಸಲಾಗಿದೆ.

ಡಿಜ಼ಿಲಾಕರ್ Account ಅನ್ನು ಯು.ಜಿ.ಸಿ. ವತಿಯಿಂದ ನಿಷ್ಕ್ರಿಯ(FREEZE) ಗೊಳಿಸಲಾಗಿರುವುದರಿಂದ, ವಿದ್ಯಾರ್ಥಿಗಳ ಭವಿಷ್ಯ ಹಿತದೃಷ್ಟಿಯಿಂದ ಡಿಜ಼ಿಲಾಕರ್ Account ಅನ್ನು (UNFREEZE) ಮಾಡುವಂತೆ ವಿಶ್ವವಿದ್ಯಾನಿಲಯವು ಮನವಿ ಮಾಡುತ್ತಲಿದೆ. ಆದ್ದರಿಂದ, ಡಿಜ಼ಿಲಾಕರ್ Account ಅನ್ನು ಯು.ಜಿ.ಸಿಯ ವತಿಯಿಂದ ಸಕ್ರಿಯಗೊಳಿಸಿದ ನಂತರ, ಅಪ್‌ಲೋಡ್ ಮಾಡಲಾಗುವುದು.

ಅಲ್ಲಿಯವರೆಗೆ, UUCMS ನ ಅಂಕಪಟ್ಟಿಯನ್ನು ಪಡೆದು, ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಸಹಿಯೊಂದಿಗೆ (ಅಗತ್ಯವಿದ್ದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಂದಲೂ ಮೊಹರು ಮತ್ತು ಸಹಿಯನ್ನು ಪಡೆಯಬಹುದಾಗಿರುತ್ತದೆ)ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಹಾಗೂ 2024 ನೇ ಸಾಲಿನ ಪದವಿ ಪ್ರಮಾಣ ಪತ್ರ (ಡಿಗ್ರಿ ಸರ್ಟಿಫಿಕೇಟ್)ಗಳನ್ನು ಶೀಘ್ರದಲ್ಲಿಯೇ ಡಿಜ಼ಿಲಾಕರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಕುಲಸಚಿವ (ಪರೀಕ್ಷಾಂಗ)